**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಮಧು ಜಿ.ಮಾದೇಗೌಡ ಇವರು "ಮಂಡ್ಯ ಜಿಲ್ಲೆಯ ಪ್ರಸಿದ್ಧ ಧಾರ್ಮಿಕ ಕ್ಷೇತ್ರಗಳಲ್ಲಿ ಮೇಲುಕೋಟೆ ಕೂಡ ಒಂದು. ಈ ಧಾರ್ಮಿಕ ಕ್ಷೇತ್ರಕ್ಕೆ ಬರುವ ಭಕ್ತರ ಸಂಖ್ಯೆಯೂ ಹೆಚ್ಚಿದೆ. ಅವರಿಂದ ಸಂಗ್ರಹವಾಗುವ ಆದಾಯಕ್ಕೂ ಕೊರತೆ ಇಲ್ಲ. ಶ್ರೀ ಕ್ಷೇತ್ರಕ್ಕೆ ಅನುದಾನ-ವರಮಾನ ಇದ್ದರೂ ಭಕ್ತರಿಗೆ ಮೂಲ ಸೌಲಭ್ಯಗಳಿಲ್ಲ. ಉಚಿತ ವಸತಿ ಮತ್ತು ಅನ್ನದಾಸೋಹ ಹಾಗೂ ಪಾರ್ಕಿಂಗ್ ವ್ಯವಸ್ಥೆ ಸೇರಿದಂತೆ ಮೂಲ ಸೌಲಭ್ಯಗಳಿಲ್ಲದೆ ತೊಂದರೆ ಆಗುತ್ತಿದೆ. ಕೋಟ್ಯಾಂತರ ರೂಪಾಯಿ ವೆಚ್ಚದಲ್ಲಿ ನಿರ್ಮಿಸಿದ ಅನ್ನದಾಸೋಹ ಭವನ ಉದ್ಘಾಟನೆ ಆಗಿದ್ದರೂ ಅನ್ನದಾಸೋಹ ಆರಂಭವಾಗಿಲ್ಲ. ಇದರಿಂದ ದೂರದಿಂದ ಬರುವ ಭಕ್ತರಿಗೆ ತೀವ್ರ ಅನಾನುಕೂಲ ಆಗಿದೆ. ಹಾಗಾಗಿ, ಅನ್ನದಾಸೋಹ ಆರಂಭ ಹಾಗೂ ಭಕ್ತರಿಗೆ ಮೂಲಸೌಲಭ್ಯಗಳನ್ನು ಕಲ್ಪಿಸುವ ಕುರಿತು " ನಿಯಮ-72ರಡಿ ಗಮನ ಸೆಳೆಯುವ ಸೂಚನೆಗೆ ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರ ಹೇಳಿಕೆ.**

*********-

<u>ಉತ್ತರ</u> :-

ಪಾಂಡವಪುರ ತಾಲ್ಲೂಕು, ಮೇಲುಕೋಟೆ ಶ್ರೀ ಚೆಲುವನಾರಾಯಣಸ್ವಾಮಿ ಮತ್ತು ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯಗಳು ಪ್ರವರ್ಗ 'ಎ' ಅಧಿಸೂಚಿತ ದೇವಾಲಯವಾಗಿದ್ದು, ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯವು ಕೇಂದ್ರ ಪುರಾತತ್ವ ಇಲಾಖಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ ಹಾಗೂ ಶ್ರೀ ಯೋಗಾ ನರಸಿಂಹಸ್ವಾಮಿ ಮತ್ತು ಕಲ್ಯಾಣಿಗಳು ರಾಜ್ಯ ಪುರಾತತ್ವ ಇಲಾಖೆಗೆ ಒಳಪಟ್ಟಿರುವ ಸಂಸ್ಥೆಯಾಗಿರುತ್ತದೆ.

ದೇವಾಲಯಕ್ಕೆ ಬರುವ ಭಕ್ತಾದಿಗಳ ಅನುಕೂಲಕ್ಕಾಗಿ ದೇವಾಲಯದ ಪಕ್ಕದಲ್ಲಿ ದಾನಿಗಳ ನೆರವಿನಿಂದ ಸುಮಾರು ರೂ.7.00 ಲಕ್ಷಗಳಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ನಿರ್ಮಿಸಲಾಗಿರುತ್ತದೆ. ದೇವಾಲಯದ ಹಿಂಭಾಗದಲ್ಲಿ ಅಕ್ಕತಂಗಿ ಕಲ್ಯಾಣಿಯ ಕಡೆಗೆ ದೇವಾಲಯದ ನಿಧಿಯಿಂದ ಶೌಚಾಲಯ ನಿರ್ಮಾಣ ಮಾಡಲಾಗಿರುತ್ತದೆ. ಕಳೆದ ವೈರಮುಡಿ ಸಮಯದಲ್ಲಿ ಬಸ್ ನಿಲ್ದಾಣದ ಬಳಿ ಹೊಸದಾಗಿ ಶೌಚಾಲಯ ನಿರ್ಮಾಣ ಮಾಡಲಾಗಿದೆ. ದೊಡ್ಡ ಕಲ್ಯಾಣಿಯ ಬಳಿ ಶೌಚಾಲಯ ನಿರ್ಮಾಣಕ್ಕೆ ಸ್ಥಳದ ಕೊರತೆಯಿದ್ದು, ಸೂಕ್ತ ಸ್ಥಳ ಗುರುತಿಸಿ ಶೌಚಾಲಯ ನಿರ್ಮಾಣಕ್ಕೆ ಕ್ರಮ ವಹಿಸಲಾಗುವುದು.

ಮೇಲುಕೋಟೆ ವ್ಯಾಪ್ತಿಯಲ್ಲಿರುವ ದೇವಾಲಯಕ್ಕೆ ಸೇರಿದ ಜಾಗದಲ್ಲಿ ಸೂಕ್ತವಾದ ಸ್ಥಳ ಗುರುತಿಸಿ ಭಕ್ತರು ಉಳಿದುಕೊಳ್ಳಲು ಅನುಕೂಲವಾಗುವಂತೆ ವಸತಿಗೃಹಗಳ ನಿರ್ಮಾಣ ಮಾಡಲು ಕ್ರಮವಹಿಸಲಾಗುವುದು. ಮೇಲುಕೋಟೆ ಕ್ಷೇತ್ರದಲ್ಲಿ ಪ್ರವಾಸೋದ್ಯಮ ಇಲಾಖೆ ವತಿಯಿಂದ ರೂ.2.00 ಕೋಟಿ ವೆಚ್ಚದಲ್ಲಿ ವಸತಿಗೃಹ ನಿರ್ಮಾಣಕ್ಕಾಗಿ ಅಂದಾಜು ಪಟ್ಟಿ ತಯಾರಿಸಿ ಉಪನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ ಇವರು ಅನುದಾನ ಕೋರಿ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ಇವರಿಗೆ ದಿನಾಂಕ:16.09.2023 ರಲ್ಲಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಮೇಲುಕೋಟೆ ಗ್ರಾಮದ ಸರ್ವೆ ನಂ.68ರಲ್ಲಿ ಪಂಚಾಯಿತಿ ವತಿಯಿಂದ ಹಣ ಪಾವತಿ ಆಧಾರದ ಮೇಲೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿರುತ್ತದೆ. ಮೇಲುಕೋಟೆ ಕ್ಷೇತ್ರದಲ್ಲಿ ರೂ.2.00 ಕೋಟಿ ಸರ್ಕಾರದ ಅನುದಾನದಲ್ಲಿ ದಾಸೋಹ ಭವನ ನಿರ್ಮಾಣ ಮಾಡಲಾಗಿದ್ದು, ದಾಸೋಹ ಪ್ರಾರಂಭಿಸಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದ್ದು 2024ರ ಡಿಸೆಂಬರ್ ಮಾಹೆಯ ಅಂತ್ಯದೊಳಗೆ ಪ್ರಾರಂಭಿಸಲಾಗುವುದು.

ಮೇಲುಕೋಟೆ ಕ್ಷೇತ್ರದಲ್ಲಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಈವರೆಗೆ ಅಭಿವೃದ್ಧಿಪಡಿಸಲಾಗಿರುವ ಮೂಲಸೌಕರ್ಯಗಳ ವಿವರವನ್ನು ಹಾಗೂ ಕೈಗೊಳ್ಳಲು ಉದ್ದೇಶಿಸಲಾಗಿರುವ ಅಭಿವೃದ್ಧಿ ಕಾಮಗಾರಿಗಳ ವಿವರಗಳನ್ನು **ಅನುಬಂಧ-1 ರಿಂದ 3 ರವರೆಗೆ** ಒದಗಿಸಿದೆ.

(ಸಂಖ್ಯೆ:ಕಂಇ 197 ಮುಸಪ್ರ 2024)

**(ರಾಮಲಿಂಗಾರೆಡ್ಡಿ)**
**ಸಾರಿಗೆ ಮತ್ತು ಮುಜರಾಯಿ ಸಚಿವರು**

## ಅನುಬಂಧ-1

### ಮೇಲುಕೋಟೆ ಪ್ರವಾಸಿ ತಾಣದಲ್ಲಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಇದುವರೆಗೂ ಅಭಿವೃದ್ಧಿಪಡಿಸಲಾಗಿರುವ ಪ್ರವಾಸಿ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ವಿವರ

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ | ವರ್ಷ | ಅನುಷ್ಠಾನ ಸಂಸ್ಥೆ |
|---|---|---|---|---|
| 01 | ಮೇಲುಕೋಟೆ ಪ್ರವಾಸಿ ತಾಣದಲ್ಲಿ ಶೌಚಾಲಯ ನಿರ್ಮಾಣ ಕಾಮಗಾರಿ | 12.00 | 2007-08 | ಕೆ.ಆರ್.ಐ.ಡಿ.ಎಲ್ ಮಂಡ್ಯ |
| 02 | ಮೇಲುಕೋಟೆಯಲ್ಲಿ ಡಾರ್ಮಿಟರಿ ನಿರ್ಮಾಣ ಕಾಮಗಾರಿ | 54.00 | 2007-08 | ಕೆ.ಆರ್.ಐ.ಡಿ.ಎಲ್ ಮಂಡ್ಯ |
| 03 | ಪಾಂಡವಪುರ ತಾಲ್ಲೂಕು ಕೆರೆ ತೊಣ್ಣೂರುನಿಂದ ಮೇಲುಕೋಟೆವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿ | 490.00 | 2015-16 | ಲೋಕೋಪಯೋಗಿ ಇಲಾಖೆ, ಮಂಡ್ಯ |
| 04 | ಮೇಲುಕೋಟೆಯ ಶ್ರೀ ಚೆಲುವನಾರಾಯಣ ಸ್ವಾಮಿ ದೇವಾಲಯದ ಎದುರುಗಡೆ ಇರುವ ವಾಹನದ ಮಂಟಪದ ಸಂರಕ್ಷಣಾ ಕಾಮಗಾರಿ. | 42.00 | 2016-17 | ಪುರಾತತ್ವ ಸಂಗ್ರಹಾಲಯ ಹಾಗು ಪಾರಂಪರಿಕ ಇಲಾಖೆ. |
| 05 | ಮೇಲುಕೋಟೆಯ ಶ್ರೀ ಆಂಜನೇಯ ಸ್ವಾಮಿ ದೇವಾಲಯದ ಹತ್ತಿರವಿರುವ ಹೆಬ್ಬಾಗಿಲಿನ ಸಂರಕ್ಷಣಾ ಕಾಮಗಾರಿ | 9.00 | 2016-17 | ಪುರಾತತ್ವ ಸಂಗ್ರಹಾಲಯ ಹಾಗು ಪಾರಂಪರಿಕ ಇಲಾಖೆ. |
| 06 | ಮೇಲುಕೋಟೆಯ ಪಾಲಿಟೆಕ್ನಿಕ್ ಮುಂಭಾಗದಲ್ಲಿರುವ ಮಂಟಪದ ಸಂರಕ್ಷಣಾ ಕಾಮಗಾರಿ. | 17.00 | 2016-17 | ಪುರಾತತ್ವ ಸಂಗ್ರಹಾಲಯ ಹಾಗು ಪಾರಂಪರಿಕ ಇಲಾಖೆ. |
| 07 | ಪಾಂಡವಪುರ ತಾಲ್ಲೋಕಿನ ಮೇಲುಕೋಟೆಯಿಂದ ಧನುಷ್ಕೋಟೆವರೆಗೆ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ. | 200.00 | 2016-17 | ಕೆ.ಆರ್.ಐ.ಡಿ.ಎಲ್. ಮಂಡ್ಯ ಜಿಲ್ಲೆ |
| | ಒಟ್ಟು | 824.00 | | |

## ಅನುಬಂಧ-2

### ಮೇಲುಕೋಟೆ ಪ್ರವಾಸಿ ತಾಣದಲ್ಲಿ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಪ್ರಸ್ತುತ ಅಭಿವೃದ್ಧಿಪಡಿಸಲಾಗಿರುವ ಪ್ರವಾಸಿ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳ ವಿವರ

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ | ವರ್ಷ | ಅನುಷ್ಠಾನ ಸಂಸ್ಥೆ |
|---|---|---|---|---|
| 01 | ಪಾಂಡವಪುರ ತಾಲ್ಲೂಕಿನ ಮೇಲುಕೋಟೆಯ ಶ್ರೀ ಚೆಲುವನಾರಾಯಣ ಸ್ವಾಮಿ ದೇವಾಲಯಕ್ಕೆ ಆಗಮಿಸುವ ಪ್ರವಾಸಿಗರಿಗೆ/ಭಕ್ತಾಧಿಗಳಿಗೆ ಅನುಕೂಲಕ್ಕಾಗಿ ಕುಡಿಯುವ ನೀರು, ಶೌಚಾಲಯ, ಪಾರ್ಕಿಂಗ್ ಹಾಗೂ ಇತರೆ ಪ್ರವಾಸಿ ಅಭಿವೃದ್ಧಿ ಕಾಮಗಾರಿ | 100.00 | 2018-19 | ಕೆ.ಆರ್.ಐ.ಡಿ.ಎಲ್ ಮಂಡ್ಯ |
| 02 | ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕು ಮೇಲುಕೋಟೆಯಲ್ಲಿ 08 ಪುರಾತನ ಮಂಟಪ ಹಾಗೂ ಕೊಳಗಳ ಸಂರಕ್ಷಣಾ ಕಾಮಗಾರಿಗಳು | 260.00 | 2021-22 | ಪುರಾತತ್ವ ಸಂಗ್ರಹಾಲಯ ಹಾಗು ಪಾರಂಪರಿಕ ಇಲಾಖೆ |
| | ಒಟ್ಟು | 360.00 | | |

Scanned with OKEN Scanne

## ಅನುಬಂಧ-3

**ಮೇಲುಕೋಟೆ ಪ್ರವಾಸಿ ತಾಣದಲ್ಲಿ ಪ್ರವಾಸಿ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸುವ ಸಂಬಂಧ ಮಂಡ್ಯ ಜಿಲ್ಲಾ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಸಲ್ಲಿಸಲಾಗಿರುವ ಪ್ರಸ್ತಾವನೆಗಳ ವಿವರ**

(ರೂ ಲಕ್ಷಗಳಲ್ಲಿ)

| ಕ್ರ.ಸಂ | ಕಾಮಗಾರಿಯ ವಿವರ | ಅಂದಾಜು ಮೊತ್ತ |
|---|---|---|
| 01 | ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಮೇಲುಕೋಟೆಯಲ್ಲಿರುವ ವಿಶ್ವಪ್ರಸಿದ್ಧ ಯಾತ್ರಾ ಸ್ಥಳವಾದ ಶ್ರೀ ಚೆಲುವನಾರಾಯಣಸ್ವಾಮಿ ಹಾಗೂ ಪಂಚಕಲ್ಯಾಣಿ ಅಭಿವೃದ್ಧಿ ಕಾಮಗಾರಿ | 20.00 |
| 02 | ಮೇಲುಕೋಟೆ ಪ್ರವಾಸಿ ತಾಣದಲ್ಲಿ ಆಧುನಿಕ ಸುಸ್ಸಜಿತ ಯಾತ್ರಿನಿವಾಸ ನಿರ್ಮಾಣ ಕಾಮಗಾರಿ ಹಾಗೂ ಲ್ಯಾಂಡ್ ಸ್ಕೇಪಿಂಗ್, ಉದ್ಯಾನವನ, ಪರಗೋಲ, ಚೈನ್‌ಲಿಂಕ್ ಫೆನ್ಸಿಂಗ್ ಮತ್ತು ನಾಮಫಲಕಗಳ ಅಳವಡಿಕೆ | 275.00 |
| 03 | ಮೇಲುಕೋಟೆಯಲ್ಲಿರುವ ಆರೋಗ್ಯ ಸಮುದಾಯಭವನದ ಎದುರು ಪ್ರವಾಸೋದ್ಯಮ ಇಲಾಖೆಯಿಂದ ಅಭಿವೃದ್ಧಿಪಡಿಸಲಾಗುತ್ತಿರುವ ಪಾರ್ಕಿಂಗ್ ಕಾಮಗಾರಿಯ ಸಮೀಪ ಕುಡಿಯುವ ನೀರಿನ ಘಟಕ ನಿರ್ಮಾಣ | 20.00 |
| 04 | ಚೆಲುವನಾರಾಯಣಸ್ವಾಮಿ ದೇವಾಲಯದ ಹಿಂಭಾಗ ಕುಡಿಯುವ ನೀರಿನ ಘಟಕ ನಿರ್ಮಾಣ | 20.00 |
| 05 | ಮೇಲುಕೋಟೆ ಗ್ರಾಮದಲ್ಲಿ ವಾಹನ ನಿಲುಗಡೆಗಾಗಿ ಬಹುಮಹಡಿಗಳ ವಾಹನ ನಿಲುಗಡೆ ಸೌಲಭ್ಯ ಅಭಿವೃದ್ಧಿಪಡಿಸುವುದು | 1000.00 |
| 06 | ಮೇಲುಕೋಟೆ ಗ್ರಾಮದ ದೇವಾಲಯದ ಆವರಣದಲ್ಲಿ ಎಲ್.ಇ.ಡಿ. ಬಲ್ಬ್‌ಗಳನ್ನು ಆಳವಡಿಸುವುದು ಮತ್ತು ರಸ್ತೆ ಅಭಿವೃದ್ಧಿಪಡಿಸುವುದು | |
| 07 | ಮೇಲುಕೋಟೆ ಪಂಚಕಲ್ಯಾಣಿಯಲ್ಲಿ ನೃತ್ಯ ಕಾರಂಜಿಯನ್ನು ಅಳವಡಿಸುವುದು | |
| 08 | ಮೇಲುಕೋಟೆ ಗ್ರಾಮದ ಧನುಷ್‌ಕೋಟೆ ಮತ್ತು ರಾಯಗೋಪುರ ಸ್ಥಳಗಳನ್ನು ಉನ್ನತೀಕರಿಸುವುದು | |
| 09 | ಮೇಲುಕೋಟೆ ಗ್ರಾಮದ ಶ್ರೀ ವೈರಮುಡಿ ಬ್ರಹ್ಮೋತ್ಸವ ಸಾಗುವ, ರಾಜ ಬೀದಿ, ಅಂಚೆ ಕಛೇರಿ ಬೀದಿಗಳನ್ನು ಮೇಲ್ದರ್ಜೆಗೇರಿಸಿ ಅಭಿವೃದ್ಧಿಪಡಿಸುವುದು | |
| 10 | ಶ್ರೀ ಕ್ಷೇತ್ರ ಮೇಲುಕೋಟೆ ಗ್ರಾಮಕ್ಕೆ ಬರುವ ಭಕ್ತಾಧಿಗಳು ಮತ್ತು ಯಾತ್ರಾರ್ಥಿಗಳು ತಂಗಲು ವಸತಿ ಗೃಹ ನಿರ್ಮಾಣ ಮಾಡುವುದು | |
| 11 | ಮೇಲುಕೋಟೆ ಗ್ರಾಮದಿಂದ ತೊಣ್ಣೂರು ಕೆರೆಗೆ ಸಂಪರ್ಕ ರಸ್ತೆ ಅಭಿವೃದ್ಧಿಪಡಿಸುವುದು | |
| 12 | ಮೇಲುಕೋಟೆ ಗ್ರಾಮದ ಅಕ್ಕ ತಂಗಿ ಕೊಳವನ್ನು ಉನ್ನತೀಕರಿಸುವುದು | |
| 13 | ಮೇಲುಕೋಟೆ ಪುರಾತನ 17 ಪುಷ್ಕರಣಿ ಮತ್ತು ಕೊಳಗಳ ಅಭಿವೃದ್ಧಿ ಮತ್ತು ಸಂರಕ್ಷಣೆ | |
| 14 | ಮೇಲುಕೋಟೆ ಶ್ರೀ ಯೋಗಾನರಸಿಂಹಸ್ವಾಮಿ ದೇವಾಲಯದ ಅಭಿವೃದ್ಧಿ ಮತ್ತು ಸಂರಕ್ಷಣಾ ಕಾಮಗಾರಿ | |
| 15 | ಮೇಲುಕೋಟೆ ಪಂಚಕಲ್ಯಾಣಿ ಅಭಿವೃದ್ಧಿ ಮತ್ತು ಸಂರಕ್ಷಣಾ ಕಾಮಗಾರಿ | |
| 16 | ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯದ ಸುತ್ತಲು ಹೊಸದಾಗಿ ರಸ್ತೆ, ಚರಂಡಿ ನಿರ್ಮಾಣ | |
| 17 | ಮೇಲುಕೋಟೆಯ ಮಂಟಪಗಳ ದುರಸ್ಥಿ | |
| 18 | ಧನುಷ್ಕೋಟಿ ಪ್ರವಾಸಿ ತಾಣದ ಅಭಿವೃದ್ಧಿ | |
| 19 | ರಾಯಗೋಪುರ ಪ್ರವಾಸಿ ತಾಣದ ಅಭಿವೃದ್ಧಿ | |
| 20 | ಅರಮನೆ ಉದ್ಯಾನವನದ ಅಭಿವೃದ್ಧಿ | |
| 21 | ಪ್ರವಾಸೋದ್ಯಮ ಇಲಾಖೆಯಿಂದ ನಿರ್ಮಿಸಿರುವ ಯಾತ್ರಿನಿವಾಸದ ಮುಂಭಾಗ ಉದ್ಯಾನವನ ಹಾಗೂ ಪಾರ್ಕಿಂಗ್ ವ್ಯವಸ್ಥೆ | |
| | ಒಟ್ಟು | 1335.00 |

ಉಪ ನಿರ್ದೇಶಕರು
ಪ್ರವಾಸೋದ್ಯಮ ಇಲಾಖೆ
ಮಂಡ್ಯ ಜಿಲ್ಲೆ, ಮಂಡ್ಯ

Scanned with OKEN Scanner